## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ

**ಸಿ ಸಿ ನಂ : 3491/2021**

**ಪಿ ಡಬ್ಲ್ಯೂ - 2**

**ಸಿ ಡಬ್ಲ್ಯೂ - 2**

**ದಿಃ 24.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಜಾಫರ್**
**ತಂದೆಯ ಹೆಸರು ಃ ಇಬ್ರಾಹಿಂ**
**ವಯಸ್ಸು ಃ 39 ವರ್ಷ**
**ಉದ್ಯೋಗ ಃ ಗಾರೆ ಕೆಲಸ**
**ವಿಳಾಸ ಃ ಹೊಳವನಹಳ್ಳಿ, ಕೊರಟಗೆರೆ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದಃ**

ಮೃತ ಮಿರ್ಜಾ ಅಬ್ಬಾಸ್ ಗೊತ್ತು. ಚಾಸಾ-1, 3 ರಿಂದ 5 ರವರು ಗೊತ್ತು. ನಾನು ಮತ್ತು ಮೃತ ಮಿರ್ಜಾ ಅಬ್ಬಾಸ್ ಇಬ್ಬರೂ ದ್ವಿಚಕ್ರವಹಾನದಲ್ಲಿ ಅಲಿಪುರಕ್ಕೆ ಒಂದು ಮನೆ ಕಟ್ಟಲು ಕಂಬಿಗಳನ್ನು ತರಲು ಹೋಗಿದ್ದೆವು. ಕಂಬಿಗಳನ್ನು ಅಲಿಪುರದಿಂದ ಆರೋಪಿಗೆ ಸೇರಿದ ಟ್ರ್ಯಾಕ್ಟರ್ ನಲ್ಲಿ ತೆಗೆದುಕೊಂಡು ಬರುತ್ತಿದ್ದೆವು. ನಾನು ನನ್ನ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದು, ಮೃತ ಮಿರ್ಜಾ ಅಬ್ಬಾಸ್ ಟ್ರ್ಯಾಕ್ಟರ್ ನ ಎಡತುದಿಯಲ್ಲಿ ಕುಳಿತಿದ್ದನು. ಟ್ರ್ಯಾಕ್ಟರ್ ನಲ್ಲಿ ಕಂಬಿಗಳನ್ನು ತುಂಬಿಕೊಂಡು ನಾವು ಹೊರಟೆವು. ಸಂಜೆ 7-30 ಗಂಟೆ ಸಮಯದಲ್ಲಿ ಆರೋಪಿ ಟ್ರ್ಯಾಕ್ಟರ್ ನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ಗುಮ್ಮನಹಳ್ಳಿಯ ಸಮೀಪ ರಸ್ತೆಯಲ್ಲಿ ಟ್ರ್ಯಾಕ್ಟರ್ ಒಂದು ಗುಂಡಿಯಲ್ಲಿ ಎಡಮಗ್ಗುಲಿಗೆ ಬಿದ್ದು ಹೋಯಿತು. ಆಗ ಅಲ್ಲಿಯೇ ಕುಳಿತಿದ್ದ ಮಿರ್ಜಾ ಅಬ್ಬಾಸ್‌ನ ತಲೆ ಎಗರಿ ಹೋಯಿತು. ನಾನು ನನ್ನ ದ್ವಿಚಕ್ರ ವಾಹನದಲ್ಲಿ ಸ್ವಲ್ಪ ಮುಂದಕ್ಕೆ ಹೋಗುತ್ತಿದ್ದೆ ಟ್ರ್ಯಾಕ್ಟರ್ ಉರುಳಿದ ಶಬ್ಧ ಕೇಳಿ ಬಂದು ನೋಡಿದಾಗ ಟ್ರ್ಯಾಕ್ಟರ್ ಬಿದ್ದಿತ್ತು. ಅದರೊಳಗಿನ ಚಾಲಕ ಕಾಣಲಿಲ್ಲ. ಆತನ ಜಾಕೇಟ್‌ನ ಮೃತ ಮಿರ್ಜಾ ಅಬ್ಬಾಸ್‌ನ

ಮೇಲೆ ಮುಚ್ಚಲಾಗಿತ್ತು. ಜಾಕೇಟ್‌ನ್ನು ತೆಗೆದು ನೋಡಿದಾಗ ಮಿರ್ಜಾ ಅಬ್ಬಾಸ್ನ ತಲೆ ಸಂಪೂರ್ಣವಾಗಿ ಜಜ್ಜಿ ಹೋಗಿತ್ತು. ನಂತರ ನಾನು ವಿಚಾರವನ್ನು ಚಾಸಾ-1 ರವರಿಗೆ ತಿಳಿಸಿದೆನು. ನಂತರ ಚಾಸಾ-1 ಮತ್ತು 3 ರವರು ಸ್ಥಳಕ್ಕೆ ಬಂದರು. ಟ್ರ್ಯಾಕ್ಟರ್ ನಂಬರ್ ಈಗ ನೆನಪಾಗುತ್ತಿಲ್ಲ. ಸಾಕ್ಷಿಯು ನಿಪಿ-3 ರಿಂದ 6 ರ ಫೋಟೋದಲ್ಲಿನ ಟ್ರ್ಯಾಕ್ಟರ್ ನ್ನು ನೋಡಿ ಗುರುತಿಸಿರುತ್ತಾರೆ. ನಂತರ ಶವವನ್ನು ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಆ್ಯಂಬುಲೆನ್ಸ್‌ನಲ್ಲಿ ಸಾಗಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಅವನೇ ಟ್ರ್ಯಾಕ್ಟರ್ ಚಲಾಯಿಸುತ್ತಿದ್ದವನು ಎಂದು ನುಡಿಯುತ್ತಾರೆ. ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ</u> ಶ್ರೀ ವಿ.ಸಿ., ಆರೋಪಿ ಪರ ವಕೀಲರಿಂದ**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪೋಲೀಸರಿಗೆ ಹೇಳಿಕೆ ನೀಡಿದ ದಿನಾಂಕ ನೆನಪಿಲ್ಲ. ನನ್ನ ಹೇಳಿಕೆಯನ್ನು ದಾಖಲಿಸಿಕೊಂಡ ಪೋಲೀಸ್ ಯಾರು ಎಂದು ಈಗ ನೆನಪಾಗುತ್ತಿಲ್ಲ. ಮೃತ ಮಿರ್ಜಾ ನನ್ನ ಬಳಿ ಕೆಲಸ ಮಾಡುತ್ತಿದ್ದ, ನಾವು ಮನೆಯಲ್ಲಿ ಕಾಲಿಪಾಳ್ಯದಲ್ಲಿ ಕಟ್ಟಬೇಕಿತ್ತು. ಪೋಲೀಸರು ನನ್ನ ಹೇಳಿಕೆಯಲ್ಲಿನ ವಿಚಾರಗಳನ್ನು ನನಗೆ ಓದಿ ತಿಳಿಸಿಲ್ಲ. ಟ್ರ್ಯಾಕ್ಟರ್ ಗೆ ಕಂಬಿಗಳನ್ನು ತುಂಬುವಾಗ ಚಾಲಕನನ್ನು ನೋಡಿದ್ದೇನೆ. ಟ್ರ್ಯಾಕ್ಟರ್ ನ ಮಾಲೀಕ ಮತ್ತು ಚಾಲಕ ಬೇರೆ ಬೇರೆ, ಮಾಲೀಕ ಚಾಲಕನನ್ನು ಕಳುಹಿಸಿದ್ದರು. ಆರೋಪಿಯನ್ನು ಪೋಲೀಸರು ತೋರಿಸಿದಾಗ ಅಷ್ಟೇ ನೋಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಟ್ರ್ಯಾಕ್ಟರ್ ನಲ್ಲಿ ಕಂಬಿ ತುಂಬುತ್ತಿರುವಾಗ ಅಷ್ಟೇ ನೋಡಿರುತ್ತೇನೆ, ಆನಂತರ ನೋಡಿರುವುದಿಲ್ಲ. ಅಪಘಾತವಾದ ಸ್ಥಳ ಸಾಕಷ್ಟು ಹಳ್ಳ ಗುಂಡಿ ಇರುವ ಸ್ಥಳ. ಸದರಿ ಸ್ಥಳದಲ್ಲಿ ಯಾವುದೇ ವಾಹನ ವೇಗವಾಗಿ ಹೋದರೆ ಮಗುಚಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಾನು ತುಂಬಾ ದೂರ ಹೋಗಿರಲಿಲ್ಲ ಸ್ವಲ್ಪ ದೂರವಷ್ಟೇ ಹೋಗಿದ್ದೆ. ನನಗೆ ಶಬ್ಧ ಕೇಳಿದ್ದರಿಂದ ನಾನು ಹೋಗಿ ನೋಡಿದ್ದೆ. ನನಗೆ ಶಬ್ಧ ಬಂದ ನಂತರ 5 ನಿಮಿಷಗಳಲ್ಲಿ ಹೋಗಿ ನೋಡಿರುತ್ತೇನೆ. ನಾನು ನನ್ನ ಮೊಬೈಲ್‌ನಿಂದಲೇ ಚಾಸಾ-1 ರವರಿಗೆ ಕರೆ ಮಾಡಿ ವಿಚಾರವನ್ನು ತಿಳಿಸಿದೆ. ನನ್ನ ಮೊಬೈಲ್ ಸಂಖ್ಯೆಯನ್ನು ಪೋಲೀಸರಿಗೆ ತಿಳಿಸಿಲ್ಲ. ಆ್ಯಂಬುಲೆನ್ಸ್ ಗೆ ಚಾಸಾ-

1 ರವರು ಕರೆ ಮಾಡಿದ್ದರು ನಾನು ಕರೆ ಮಾಡಿರಲಿಲ್ಲ. ಮೃತನ ತಲೆ ಜಜ್ಜಿ ಹೋಗಿತ್ತು, ಸೊಂಟ ಮುರಿದು ಕೈಗಳಿಗೂ ಏಟಾಗಿತ್ತು. ಘಟನಾ ಸ್ಥಳದಲ್ಲಿ ವಿದ್ಯುತ್ ಇರಲಿಲ್ಲ, ಕತ್ತಲೆ ಆಗಿದ್ದರಿಂದ ಅಲ್ಲಿ ಸರಿಯಾಗಿ ಏನು ಕಾಣುತ್ತಿರಲಿಲ್ಲ ಎಂದರೆ ಸರಿ. ಈ ಪ್ರಕರಣವನ್ನು ಮೃತನಿಗೆ ವಿಮೆ ಹಣ ಬರಲಿ ಎಂದು ಸಲ್ಲಿಸಲಾಗಿದೆ ಎಂದರೆ ಸರಿ. ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**